ಅ) *ಟಿ. ನರಸೀಪುರದ ಮುನ್ಸಿಫ್ ಕೋರ್ಟಿನ ಹೊಸ ಕಟ್ಟಡದ ಕೆಲಸವು ಯಾವಾಗ ಪ್ರಾರಂಭವಾಯಿತು? ಅದರ ಅಂದಾಜು ಎಷ್ಟು;*

ಆ) *1996-97ನೇ ಸಾಲಿನಲ್ಲಿ ಕಟ್ಟಡಕ್ಕೆ ಕೊಟ್ಟಿರುವ ಹಣವೆಷ್ಟು? ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ; ಸದರಿ ಕಟ್ಟಡದ ಕೆಲಸ ಎಲ್ಲಿಯವರೆಗೆ ನಡೆದಿರುತ್ತದೆ?*

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 1) 01.06.1992 ರಂದು ಪ್ರಾರಂಭವಾಯಿತು.

2) ಅಂದಾಜು ವೆಚ್ಚ - 50.00 ಲಕ್ಷ ರೂ.ಗಳು

3) ಪರಿಷ್ಕರಿಸಿದ ಅಂದಾಜು ವೆಚ್ಚ - 54.00 ಲಕ್ಷ ರೂ.ಗಳು

ಆ) 1) 1996-97ನೇ ಸಾಲಿನಲ್ಲಿ 4.00 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

2) 18.00 ಲಕ್ಷ ರೂ.ಗಳು ಬೇಕಾಗುವುದೆಂದು ಅಂದಾಜಿಸಲಾಗಿದೆ.

3) ಕೆಲಸವು ಪೂರ್ಣಗೊಳ್ಳುವ ಹಂತದಲ್ಲಿದೆ.

ಅಬಕಾರಿ ಇಲಾಖೆಯ ಬಾಡಿಗೆ ಕಟ್ಟಡಗಳ ಕಛೇರಿಗಳು

2356 - ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕಲ್) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರಿನಲ್ಲಿ ಅಬಕಾರಿ ಇಲಾಖೆಯ ಎಷ್ಟು ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ತಿಂಗಳಿಗೆ ಎಷ್ಟು ಬಾಡಿಗೆ ಸಂದಾಯವಾಗುತ್ತಿದೆ.*

ಆ) *ಮಂಗಳೂರು ಮೇರಿಹಿಲ್ ನಲ್ಲಿರುವ ಸ್ವಂತ ಕಟ್ಟಡವನ್ನು ಅಭಿವೃದ್ಧಿ ಪಡಿಸಿದರೆ ಎಲ್ಲಾ ಕಛೇರಿಗಳನ್ನು ಒಂದೇ ಕಡೆ ನಡೆಸಲು ಸಾಧ್ಯವಿಲ್ಲವೇ?*

ಇ) *ಹಾಗಿದ್ದಲ್ಲಿ, ಕಟ್ಟಡವನ್ನು ಅಭಿವೃದ್ಧಿಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಕೆ.ಬಿ. ಶಾಣಪ್ಪ (ಅಬಕಾರಿ ಸಚಿವರು) :

ಅ) ಮಂಗಳೂರಿನಲ್ಲಿ ಅಬಕಾರಿ ಇಲಾಖೆಯ ಏಳು ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಇವುಗಳಿಗೆ ಮಾಸಿಕ ರೂ. 15,430-00 ಗಳು ಬಾಡಿಗೆ ರೂಪದಲ್ಲಿ ಸಂದಾಯವಾಗುತ್ತಿದೆ.

ಆ) ಸಾಧ್ಯವಿದೆ

ಇ) ಕಟ್ಟಡದ ನೆಲ ಅಂತಸ್ತು ಹಾಗೂ ಎರಡು ಅಂತಸ್ತುಗಳ ನಿರ್ಮಾಣಕ್ಕೆ ರಾಜ್ಯದ ಮುಖ್ಯ ವಾಸ್ತುಶಿಲ್ಪಜ್ಞರಿಂದ ನಕಾಶೆಯು ಅಂಗೀಕೃತವಾಗಿರುತ್ತದೆ. ಕಟ್ಟಡದ ನಿರ್ಮಾಣವನ್ನು ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ. ನೆಲ ಅಂತಸ್ತಿನ ಕಟ್ಟಡವನ್ನು ರೂ. 18,55,210-00 ಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಮೊದಲ ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಬೇಕಾದ ರೂ. 26.50 ಲಕ್ಷಗಳ ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಕುರಿತು ಪರಿಶೀಲನೆಯಲ್ಲಿದೆ.